ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ತಹಶೀಲ್ದಾರವರ ನ್ಯಾಯಾಲಯ, ಕೂಡ್ಲಿಗಿ

ಸಂ/ಕಂ/ಪಹಣಿ:ವಿವಾದ/11/2016-17. ದಿನಾಂಕ: 17-08-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಟಿ.ರಾಜು ತಂದೆ ಟಿ.ಮಲಿಯಪ್ಪ<br>2)ಟಿ.ಪದ್ಮಾವತಿ ತಂದೆ ಟಿ.ಮಲಿಯಪ್ಪ<br>3)ಟಿ.ಎಂ.ಮಂಜುಳ ತಂದೆ ಟಿ.ಮಲಿಯಪ್ಪ<br>ತುಪ್ಪಾಕನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು | 1)ಟಿ.ಮರಿಬಸಪ್ಪ ತಂದೆ ಬಸಪ್ಪ<br>2)ಟಿ.ಮಚ್ಚೆಹನುಮಪ್ಪ ತಂದೆ ಬಸಪ್ಪ<br>ತುಪ್ಪಾಕನಹಳ್ಳಿ ಗ್ರಾಮ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ನಾಗಲಾಪುರ ಗ್ರಾಮದ ಸನಂ 215. ವಿಸ್ತೀರ್ಣ 4-68. ಸನಂ 228ಬಿ. ವಿಸ್ತೀರ್ಣ4-69. ಸನಂ 233ಎ. ವಿಸ್ತೀರ್ಣ 1-94. ಎಕ್ರೆ ಜಮೀನುಗಳನ್ನು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ನಾಗಲಾಪುರ ಗ್ರಾಮದ ಸನಂ 215. ವಿಸ್ತೀರ್ಣ 4-68. ಸನಂ 228ಬಿ. ವಿಸ್ತೀರ್ಣ4-69. ಸನಂ 233ಎ. ವಿಸ್ತೀರ್ಣ 1-94. ಎಕ್ರೆ ಜಮೀನುಗಳನ್ನು ಸದರಿ ತಾಲೂಕು ತುಪ್ಪಾಕನಹಳ್ಳಿ ಗ್ರಾಮದ ಟಿ.ರಾಜು ತಂದೆ ಮಲಿಯಪ್ಪ ಇವರು ಪಾಲು ವಿಭಾಗದ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ನಾಗಲಾಪುರ ಇವರು ನಮೂನೆ-21 ರ ನೋಟಿಸನ್ನು ದಿನಾಂಕ 09-09-2008. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ತುಪ್ಪಾಕನಹಳ್ಳಿ ಗ್ರಾಮದ ಟಿ.ಮರಿಬಸಪ್ಪ ತಂದೆ ಬಸಪ್ಪ, ಟಿ.ಮಚ್ಚೆಹನುಮಪ್ಪ ತಂದೆ ಬಸಪ್ಪ, ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್:14/2008-09. ದಿನಾಂಕ 10-10-2008. ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 28-06-2016 ರಿಂದ 17-08-2016. ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರ ನಾಗಲಾಪುರ ಗ್ರಾಮದ ಸನಂ 215. ವಿಸ್ತೀರ್ಣ 4-68. ಸನಂ 228ಬಿ. ವಿಸ್ತೀರ್ಣ4-69. ಸನಂ 233ಎ. ವಿಸ್ತೀರ್ಣ 1-94. ಎಕ್ರೆ ಜಮೀನುಗಳು ಪಾಲು ವಿಭಾಗದ ಪತ್ರ ಪ್ರಕಾರ ನಮ್ಮ ಹಿಸ್ಸ್ಯಾಕ್ಕೆ ಬಂದಿರುತ್ತವೆ. ಕಾರಣ ಸದರಿ ಪಾಲು ವಿಭಾಗದ ಪತ್ರ ಪ್ರಕಾರ ನಮ್ಮಗಳ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನುಗಳು ನನ್ನ ಹೆಸರಲ್ಲಿ ಲೆಕ್ಕ ದಾಖಲೆ ಪಟ್ಟಾ ಇರುತ್ತವೆ. ನಮಗೆ ತಿಳಿಸದೇ ಅರ್ಜಿದಾರರು ಖಾತಾ ಬದಲಾವಣೆಗೆ ಅರ್ಜಿ ಸಲ್ಲಿಸಿರುವುದರಿಂದ ಸದರಿ ಪಾಲು ವಿಭಾಗದ ಪತ್ರ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಮು.ತಿ.ನೋ:2

ದಿನಾಂಕ 17-08-2016 ರಂದು ವಿಚಾರಣೆಯಲ್ಲಿ ಉಭಯರು ಹಾಜರಾಗಿದ್ದು ಸದರಿ ವಿವಾದಿತ ಜಮೀನುಗಳ ಬಗ್ಗೆ ಉಭಯರು ರಾಜಿಯಾಗಿರುವುದರಿಂದ ಯಾವುದೇ ರೀತಿಯಿಂದ ತಂಟೆ ತಕರಾರು ಇರುವುದಿಲ್ಲವೆಂದು ಈಗ ನನ್ನ ಹೆಸರಿನಲ್ಲಿರುವ ಪಹಣಿಗಳನ್ನು ಯಥಾಸ್ಥಿತಿಯಂತೆ ಇರುವಂತೆ ಮಾಡಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನುಗಳ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ಉಭಯರು ರಾಜಿಯಾಗಿ ಯಥಾಸ್ಥಿತಿಯಂತೆ ಮಾಡಲು ಕೋರಿದ ಕಾರಣ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**-:ಆದೇಶ:-**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಊಕು ನಾಗಲಾಪುರ ಗ್ರಾಮದ ಸನಂ 215. ವಿಸ್ತೀರ್ಣ 4-68. ಸನಂ 228ಬಿ. ವಿಸ್ತೀರ್ಣ4-69. ಸನಂ 233ಎ. ವಿಸ್ತೀರ್ಣ 1-94. ಎಕ್ರೆ ಜಮೀನುಗಳನ್ನು ಉಭಯರು ರಾಜಿಯಾಗಿ ಯಥಾಸ್ಥಿತಿಯಂತೆ ಮುಂದುವರೆಸಲು ಕೋರಿರುವ ಕಾರಣ ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸುತ್ತಾ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಯಗೋಳಿಸಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 17-08-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು ಕೂಡ್ಲಿಗಿ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಟಿ.ರಾಜು ತಂದೆ ಟಿ.ಮಲಿಯಪ್ಪ. ಟಿ.ಪದ್ಮಾವತಿ ತಂದೆ ಟಿ.ಮಲಿಯಪ್ಪ. ಟಿ.ಎಂ.ಮಂಜುಳ ತಂದೆ ಟಿ.ಮಲಿಯಪ್ಪ. ತುಪ್ಪಾಕನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಟಿ.ಮರಿಬಸಪ್ಪ ತಂದೆ ಬಸಪ್ಪ. ಟಿ.ಮಚ್ಚೆಹನುಮಪ್ಪ ತಂದೆ ಬಸಪ್ಪ. ತುಪ್ಪಾಕನಹಳ್ಳಿ ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕವೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.

ದೃಢೀಕೃತ ನಕಲು

ಶಿರಸ್ತೇದಾರರು
ತಾಲ್ಲೂಕು ಕಛೇರಿ
ಕೂಡ್ಲಿಗಿ